# ನಿಚ್ಚಂ ಪೊಸತು

ಮಾನಿಷಾದ ಪ್ರತಿಷ್ಠಾಂತ್ವಮಗಮಃ ಶಾಶ್ವತೀಸ್ಸಮಾಃ
ಯತ್ಕ್ರೌಂಚಮಿಥುನಾದೇಕಮವಧೀಃ ಕಾಮಮೋಹಿತಂ

"ಎಲೈ ಬೇಡನೆ, ಕಾಮಮೋಹಿತವಾದ ಕ್ರೌಂಚ ಮಿಥುನದಲ್ಲಿ ಒಂದನ್ನು ನೀನು ಕೊಂದೆಯಾದ್ದರಿಂದ ಬಹಳ ಕಾಲ ನಿನಗೆ ಉನ್ನತಿ ದೊರೆಯದೆ ಹೋಗಲಿ" ಎಂಬುದು ಇದರ ಅರ್ಥ.

ವಾಲ್ಮೀಕಿಯ ಶೋಕತಪ್ತವಾದ ಈ ನುಡಿಯೇ ಶ್ಲೋಕವಾಗಿ ರೂಪುಗೊಂಡು, ರಾಮಾಯಣ ಕಾವ್ಯಕ್ಕೆ ಪ್ರೇರಣೆಯಾಯಿತು ಎಂಬುದು ಒಂದು ಪ್ರತೀತಿ. ಹಾಗೆಯೇ, ಈ ಶ್ಲೋಕದಲ್ಲಿ ಕ್ರೌರ್ಯ, ಕೋಪ, ಶಾಪಗಳು ಬೆರೆತು ಹೋದುದರಿಂದ, ಇಡೀ ರಾಮಾಯಣದುದ್ದಕ್ಕೂ ಹತ್ಯೆ, ದುರಂತಗಳು ಸಂಭವಿಸಿದುವು ಎಂಬ ಅಭಿಪ್ರಾಯಗಳಿವೆ. ಆದರೆ, ಈ ಬಗೆಯ ಊಹಾತ್ಮಕ ಗ್ರಹಿಕೆಗಳನ್ನು ಆಧರಿಸಿಯೇ ರಾಮಾಯಣವನ್ನು ಪರಿಭಾವಿಸುವುದು ಸಮಂಜಸವಲ್ಲ. ಏಕೆಂದರೆ, ಪ್ರತಿಯೊಂದು ಓದಿನ ಸಂದರ್ಭದಲ್ಲೂ ಹೊಸ ಹೊಸ ಅರ್ಥಗಳನ್ನು ಹೊರಹೊಮ್ಮಿಸುವ ಈ ಗ್ರಂಥವನ್ನು, ಅದರ ಘಟನೆಗಳನ್ನು ಹಲವು ದೃಷ್ಟಿ ಕೋನಗಳಿಂದ ವಿಶ್ಲೇಷಿಸುವ ಸಾಧ್ಯತೆಗಳು ಅಪಾರವಾಗಿವೆ. ರಾಮಾಯಣವನ್ನು ಕೇವಲ ಧಾರ್ಮಿಕ ಚೌಕಟ್ಟಿನಲ್ಲಿ ಗ್ರಹಿಸಲಾಗುವುದಿಲ್ಲ. ಅದು ಬಹುಮುಖೀ ನೈತಿಕ ಮೌಲ್ಯಗಳನ್ನುಳ್ಳ ಕೃತಿ. ರಾಮಾಯಣದ ಹುಟ್ಟಿಗೆ ಕಾರಣವಾದ ಶ್ಲೋಕವೇ ಮುಂದೆ ವಿಸ್ತೃತ ಕಾವ್ಯರಚನೆಗೆ ಮೂಲವಾಗುವುದು ಅಪರೂಪದ ಸಂಗತಿಯಾಗಿದೆ. ಕ್ರೌಂಚವಧೆಯ ಸಂದರ್ಭವೇ ಅಂಥದ್ದು! ಅದು ವಾಲ್ಮೀಕಿಯ ಸ್ಮೃತಿಪಟಲದಲ್ಲಿದ್ದ ಬೀಜ ರೂಪಿ ಹೊಳವಿಗೆ ವಿಭಿನ್ನ ಅರ್ಥಗಳನ್ನು ಒದಗಿಸಿತು.



ವಾಲ್ಮೀಕಿ ರಾಮನ ಕಥೆಯನ್ನು ಕಾವ್ಯವನ್ನಾಗಿ ಬರೆದ ಮೇಲೆ ಅನೇಕ ಭಾಷೆಗಳಲ್ಲಿ ನೂರಾರು ಕವಿಗಳು ತಮ್ಮ ದೃಷ್ಟಿಗನುಗುಣವಾಗಿ ಹೇಳಿದ್ದಾರೆ. ಕನ್ನಡ ಶಿಷ್ಟ ರಾಮಾಯಣಗಳ ಪರಂಪರೆ ನಾಗಚಂದ್ರನ 'ರಾಮಚಂದ್ರಚರಿತ ಪುರಾಣ'ದಿಂದಲೇ ಆರಂಭವಾಯಿತೆಂದುಕೊಂಡರೂ, ಅದರ ಒಂದು ತೆಳು ರೇಖೆ 'ಚಾವುಂಡರಾಯ ಪುರಾಣ'(ಕ್ರಿ.ಶ. 978)ದಲ್ಲಿ ಮೊಟ್ಟ ಮೊದಲಿಗೆ ಕಾಣಬರುತ್ತದೆ. ಮುಖ್ಯವಾಗಿ ರಾಮಾಯಣ ಗ್ರಂಥಗಳು ಪುರಾಣ, ಇತಿಹಾಸ, ಕಾವ್ಯ – ಇವುಗಳಲ್ಲಿ ಯಾವುದೇ ಇರಲಿ, ಅದು ಏನನ್ನು ಹೇಳುತ್ತಿದೆ ಎಂಬ ಕುತೂಹಲದ ಹುಡುಕಾಟ ಮುಂದುವರೆದುಕೊಂಡೇ ಬಂದಿದೆ. ಹೀಗಾಗಿ, ಕಾವ್ಯ ರಚನೆಯ ಸಂದರ್ಭವೇ ಕವಿಯೊಬ್ಬನ ಸೃಜನಶೀಲತೆಯ ಬಹುಮುಖ್ಯ ಪ್ರೇರಣೆ ಎನ್ನಬೇಕಾಗುತ್ತದೆ. ಕನ್ನಡ ರಾಮಾಯಣಗಳ ಕಥಾವಿನ್ಯಾಸ, ಮೌಲ್ಯ ಪ್ರತಿಪಾದನೆ, ಭಾಷಿಕ ನೆಲೆಗಳನ್ನು ಈ ಹಿನ್ನೆಲೆಯಲ್ಲೇ ಪರಿಭಾವಿಸಬೇಕಾಗುತ್ತದೆ. ಇದು ಅನಿವಾರ್ಯವೂ, ಅಗತ್ಯವೂ ಹೌದು.

'ರಾಮಾಯಣ' ಎಂದ ಕೂಡಲೇ ಕನ್ನಡಿಗರಿಗೆ ನೆನಪಾಗುವುದು ರಾಮನ ಕಥೆ; ವಾಲ್ಮೀಕಿ ರಚಿಸಿದ ಕಾವ್ಯ. ಅದು ಸಂಸ್ಕೃತದಲ್ಲಿ ರಚನೆಯಾಗಿರುವ ಗ್ರಂಥ ಎಂಬುದನ್ನು ಮರೆತು, ಕಥೆಯನ್ನು ಕೇಳಲು ಸಿದ್ಧರಾಗುತ್ತಾರೆ. ಇದಕ್ಕೆ ಬಹುಮುಖ್ಯ ಕಾರಣವೆಂದರೆ, ಅದು ಧರ್ಮಗ್ರಂಥ ಎನ್ನುವುದು; ಜೊತೆಗೆ ರಾಮ ಭಕ್ತಿ. ಆದರೆ, ರಾಮಾಯಣದ ಓದನ್ನು ಇಷ್ಟಕ್ಕೆ ಮಾತ್ರ ಸೀಮಿತಗೊಳಿಸಬಾರದು. ಏಕೆಂದರೆ, ವಾಲ್ಮೀಕಿ ರಾಮಾಯಣದ ಆಕೃತಿಗೆ ಒಂದು ನವೀನವಾದ ವಿಶಿಷ್ಟ ಆಯಾಮವನ್ನು ಒದಗಿಸಿದ ಕನ್ನಡದ ಕೃತಿ ನಾಗಚಂದ್ರನ 'ರಾಮಚಂದ್ರಚರಿತ ಪುರಾಣ'. ಇದು ಜೈನಧರ್ಮದ ತಾತ್ವಿಕ ನೆಲೆಗಟ್ಟಿನ ಮೇಲೆ ರಚಿತಗೊಂಡಿದ್ದರೂ, ವ್ಯಕ್ತಿಧರ್ಮದ ನಿಲುವುಗಳನ್ನು ಸ್ಪಷ್ಟಪಡಿಸುವ ಕೃತಿ. ವೈದಿಕ ಸಂವೇದನೆಯ ಕಥೆಯೊಂದನ್ನು ಜೈನೀಯ ಚೌಕಟ್ಟಿನಲ್ಲಿ ಪರಿವರ್ತಿಸಿದ್ದು ಮಹತ್ವದ ಸಂಗತಿ. ಅಲ್ಲಿನ ರಾವಣನ ಪಾತ್ರದ ನವೀನ ಆವಿಷ್ಕಾರವನ್ನು ವಿಶಿಷ್ಟ ಮಾದರಿ ಅಥವಾ ವ್ಯಕ್ತಿಗುಣ